**ದಿನಾಂಕಃ 21-08-2023 ರಂದು ಆದ ಮಧ್ಯಂತರ ಅರ್ಜಿ ಸಂಖ್ಯೆ.6 ಮತ್ತು 7 ರ ಆದೇಶಗಳ ಮೇರೆಗೆ ಪಾಟೀ ಸವಾಲಿಗೋಸ್ಕರ ಸಾಕ್ಷಿಯನ್ನು ಮರಳಿ ಕರೆಯಲಾಗಿದೆ .**

**ದಿನಾಂಕಃ 27-11-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .**

**ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ.ಹೆಚ್.ಎಂ.ಎಸ್. ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಸ್ವಂತ ಊರು ಸಬ್ಬತ್ತಿ ಗ್ರಾಮ, ಭಟ್ಕಲ್ ತಾಲ್ಲೂಕು, ಕಾರವಾರ ಜಿಲ್ಲೆ ಆಗಿರುತ್ತದೆ. 1 ನೇ ಪ್ರತಿವಾದಿಯ ಗಂಡ ಹಾಗು 2 ರಿಂದ 4 ನೇ ಪ್ರತಿವಾದಿಗಳ ತಂದೆಯಾದ ವಾಸುದೇವ ಹೆಬ್ಬಾರ ರವರ ಊರು ಪಡುಕೋಣೆ ಗ್ರಾಮ ಕುಂದಾಪುರ ತಾಲ್ಲೂಕು ಉಡುಪಿ ಜಿಲ್ಲೆ ಆಗಿದೆ. ಸದರಿ ವಾಸುದೇವ ನನ್ನ ದೂರದ ಸಂಬಂಧಿಕನಾಗಬೇಕು. 1989 ನೇ ಇಸವಿಯಲ್ಲಿ ನಾನು ರಾಣೇಬೆನ್ನೂರಿಗೆ ಬಂದಿದ್ದೇನೆ . ಸದರಿ ಇಸವಿಯಲ್ಲಿ ನನ್ನನ್ನು ವಾಸುದೇವ ತಂದೆ ಮಂಜುನಾಥ ಹೆಬ್ಬಾರ ರವರು ನನ್ನನ್ನು ರಾಣೇಬೆನ್ನೂರಿಗೆ ಕರೆದು ಕೊಂಡು ಬಂದಿರುತ್ತಾರೆ. ಸದರಿ ವಾಸುದೇವ ರವರ ತಂದೆಯಾದ ಮಂಜುನಾಥ ಹೆಬ್ಬಾರ ರವರಿಗೆ 5 ಜನ ಹೆಣ್ಣುಮಕ್ಕಳು ಮತ್ತು 5 ಜನ

ಗಂಡು ಮಕ್ಕಳು. ಸದರಿ ಮಂಜುನಾಥ ಹೆಬ್ಬಾರ್ರ ರವರು ಅಗರ್ಭ ಶ್ರೀಮಂತರಾಗಿದ್ದರು ಎಂದರೆ ಸರಿ. 1989 ನೇ ಇಸವಿಯಲ್ಲಿ ನನ್ನನ್ನು ಸದರಿ ವಾಸುದೇವ ಹೆಬ್ಬಾರ್ರ ರವರು ಕರೆದು ಕೊಂಡು ಬಂದ ಸಮಯದಲ್ಲಿ ಸದರಿ ವಾಸುದೇವ ಹೆಬ್ಬಾರ್ರ ರವರು ಅನಂತ ಹೋಟೆಲ್ ಮತ್ತು ಲಾಡ್ಜನ ಏಕೈಕ ಮಾಲೀಕರಾಗಿದ್ದರು ಎಂದರೆ ಸರಿ. ಸದರಿ ವಾಸುದೇವ ಹೆಬ್ಬಾರ್ರ ರವರು ನನ್ನನ್ನು ಸದರಿ ಲಾಡ್ಜನ ಮ್ಯಾನೇಜರ ಕೆಲಸಕ್ಕೆಂದು ಕರೆದು ಕೊಂಡು ಬಂದಿದ್ದರು .1989 ನೇ ಇಸವಿಯಲ್ಲಿ ಸದರಿ ಹೋಟೆಲ್ ನ ಮ್ಯಾನೇಜರೆಂದು ನನ್ನನ್ನು ಕರೆದು ಕೊಂಡು ಬಂದ ಸಮಯದಿಂದ ಮತ್ತು ಸದರಿ ಹೋಟೆಲ್ ನ್ನು ಮಾರುವವರೆಗೆ ನಾನು ನನ್ನ ಸಂಬಳವನ್ನು ಪಡೆದು ಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಸದರಿಯವರ ಮನೆಯಲ್ಲಿಯೇ ವಾಸವಾಗಿರುತ್ತಿದ್ದೆ ಆದರೆ ನನಗೆ ಖರ್ಚಿಗೆಂದು ಹಣ ಕೊಡುತ್ತಿದ್ದರು ಎಂದು ನುಡಿಯುತ್ತಾರೆ. 2007 ನೇ ಇಸವಿಯಲ್ಲಿ ನನ್ನ ಮದುವೆಯಾಗಿರುತ್ತದೆ. ನನ್ನ ಮದುವೆಯಾದ ನಂತರ ನಾನು ನನ್ನ ಹೆಂಡತಿ ಮತ್ತು ಮಕ್ಕಳೊಂದಿಗೆ

ಪ್ರತ್ಯೇಕವಾಗಿ ವಾಸವಾಗಿದ್ದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು 2017 ನೇ ಇಸವಿಯಲ್ಲಿ ಬಾಡಿಗೆಯ ಮನೆಗೆ ಹೋಗಿದ್ದೇನೆ ಎಂದು ನುಡಿಯುತ್ತಾರೆ. ಸದರಿ ವಾಸುದೇವ ಹೆಬ್ಬಾರ ರವರು ನನ್ನನ್ನು ಕೇವಲ ಹೋಟೆಲ್ ನ ಮ್ಯಾನೇಜರ ಎಂದು ನೇಮಕ ಮಾಡಿರಲಿಲ್ಲ ನನ್ನನ್ನು ತಮ್ಮ ಮನೆಯ ಕೆಲಸಗಳನ್ನೂ ಸಹ ನನ್ನ ಬಳಿಯಿಂದ ಮಾಡಿಸಿ ಕೊಳ್ಳುತ್ತಿದ್ದರು .

ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.